

ಭಾರತದ ಪರಿಸರ ಮಾಲಿನ್ಯರಹಿತ ಗಿರಿಧಾಮಗಳಲ್ಲಿ ಅಗ್ರಸ್ಥಾನ ಪಡೆದಿರುವ ಸ್ಥಳವಿದು. ನಗರ ಜೀವನದ ಜಂಜಾಟ ಮರೆತು ಕುದುರೆಗಳನ್ನೇರಿ ಅಥವಾ ಚಾರಣ ಮಾಡುತ್ತಾ, ಹಕ್ಕಿಗಳ ಇಂಪಾದ ಧ್ವನಿಯಾಲಿಸುತ್ತಾ ಇಲ್ಲಿನ ಕಾಡು ಸುತ್ತುವುದು ನಿಜಕ್ಕೂ ಚೇತೋಹಾರಿ ಅನುಭವ.

★ ಚಿತ್ರ- ಲೇಖನ:
**ಎಚ್.ಎಸ್. ನವೀನಕುಮಾರ್ ಹೊಸದುರ್ಗ**



ಸೌಲಭ್ಯಗಳಿರುವ ವಸತಿಗೃಹಗಳು, ರೆಸಾರ್ಟ್‌ಗಳೂ ಲಭ್ಯ. ಉಳಿದುಕೊಳ್ಳುವವರಿಗೆ ತೊಂದರೆ ಇಲ್ಲ.

ಮಾಥೆರನ್ ಗಿರಿಧಾಮದಲ್ಲಿ ಅದಮ್ಯ ಪ್ರಕೃತಿ ಸೌಂದರ್ಯವನ್ನು ಮನದ ಪರದೆಯ ಮೇಲೆ ಅಚ್ಚಳಿಯದಂತೆ ಮೂಡಿಸುವ ಒಟ್ಟು 38 ವೀಕ್ಷಣಾ ಸ್ಥಳಗಳಿವೆ. ಸೂಯಾಸ್ತ, ಸೂರ್ಯೋದಯದ ದೃಶ್ಯಗಳು ಕಾಣುವ ಪನೋರಮಾ ಪಾಯಿಂಟ್, ಪ್ರತಿಧ್ವನಿ ಮೊಳಗಿಸುವ ಇಕೋ ಪಾಯಿಂಟ್, ಖಂಡಾಲಾ ಘಾಟಿಯ ದೃಶ್ಯ ಕಾಣಿಸುವ ಖಂಡಾಲಾ ಪಾಯಿಂಟ್, ಸುಂದರ ಕೊಳವಿರುವ ಶೆರ್ಲಟ್ ಪಾಯಿಂಟ್, ಧುಮ್ಮಿಕ್ಕುವ ಜಲಪಾತ ಕಾಣಿಸುವ ಸಿಲಿಯಾ ಪಾಯಿಂಟ್, ಕಣಿವೆಯ ಸುಂದರ ದೃಶ್ಯ ಕಾಣಿಸುವ ಲಾರ್ಡ್ಸ್ ಹಾಗೂ ಎಡ್ವರ್ಡ್ಸ್ ಪಾಯಿಂಟ್‌ಗಳಲ್ಲಿ ನಿಂತು ಪ್ರಕೃತಿಯನ್ನು ಸವಿಯುವುದೇ ಜೀವನದ ಒಂದು ಅತ್ಯುತ್ತಮ ಅನುಭವ. ಜತೆಗೆ ಅರಣ್ಯದ ಮಧ್ಯೆ ಉಪಸ್ಥಿತನಾಗಿರುವ ಪಿಸರ್‌ನಾಥ್ ಮಹಾದೇವನ ಮಂದಿರವನ್ನೂ ನೋಡಬಹುದು.

ಅಂದ ಹಾಗೆ ಒಂದೇ ದಿನದ ಗಡಿಬಿಡಿಯಲ್ಲಿ ಇವೆಲ್ಲವನ್ನೂ ನೋಡಲು ಸಾಧ್ಯವಿಲ್ಲ. ಒಂದಕ್ಕಿಂತ ಒಂದು ಭಿನ್ನವಾಗಿರುವ ಈ ಮೋಹಕ ವೀಕ್ಷಣಾ ಸ್ಥಳಗಳೆಲ್ಲವನ್ನೂ ನೋಡಲು ಕನಿಷ್ಠ 2 ದಿನವಾದರೂ ಬೇಕು. ಪುರುಸೊತ್ತಿದ್ದರೆ ನಾಲ್ಕು ದಿನ ಉಳಿದುಕೊಂಡರೂ ಖಂಡಿತಾ ಬೇಸರವಾಗುವುದಿಲ್ಲ. ಇಲ್ಲಿನ ಪಾಯಿಂಟ್‌ಗಳ ವೀಕ್ಷಣೆಗೆ ಕಾಲ್ನಡಿಗೆ, ಕುದುರೆ ಸವಾರಿ ಅಥವಾ ಡೋಲಿಗಳಲ್ಲೇ ತೆರಳಬೇಕು.

ಸಹ್ಯಾದ್ರಿ ಗಿರಿಶ್ರೇಣಿಯ ಮುಕುಟಪ್ರಾಯದಂತಿರುವ ಈ ಗಿರಿಧಾಮವನ್ನು 1850ರಲ್ಲಿ ಥಾಣೆಯ ಜಿಲ್ಲಾಧಿಕಾರಿಯಾಗಿದ್ದ ಎಚ್.ಪಿ ಮಾಲೆಟ್ ಎಂಬಾತ ಪತ್ತೆ ಹಚ್ಚಿದ. ಆಗಿನ ಕಾಲದಿಂದಲೇ ಇಲ್ಲಿನ ಪರಿಸರ ಸಮತೋಲನವನ್ನು ಕಾಪಾಡಲು ವಾಹನ ಪ್ರವೇಶವನ್ನು ನಿಷೇಧಿಸಲಾಯಿತು. ವರ್ಷದುದ್ದಕ್ಕೂ ಸುಮಾರು 16 ರಿಂದ 32 ಡಿಗ್ರಿ ಉಷ್ಣತೆಯಿರುವ ಈ ಗಿರಿಧಾಮ ನೋಡಲು ಅಕ್ಟೋಬರ್ ನಿಂದ ಮೇ ಸೂಕ್ತ ಕಾಲ.

ವೈವಿಧ್ಯಮಯ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಏಕೆಂದರೆ ಇಲ್ಲಿ ಎಲ್ಲಾ ದರಗಳ ಹೋಟೆಲ್‌ಗಳೂ ಲಭ್ಯ. ಈ ಸ್ಥಳದ ಕುರಿತು ಅಂತರ್ಜಾಲದಲ್ಲಿ ಮಾಹಿತಿ ಸಂಗ್ರಹಿಸಿಕೊಂಡು ಹೋಗುವುದು ಸೂಕ್ತ. ಹಾಗೆಯೇ ಪಾಯಿಂಟ್‌ಗಳ ವೀಕ್ಷಣೆಗೆ ಕುದುರೆಗಳನ್ನೇರಿ ಹೋಗಲು ದರದ ಬಗ್ಗೆ ಚೌಕಾಸಿ ಮಾಡುವುದು ಲೇಸು. ಇಲ್ಲದಿದ್ದರೆ ಬೇಸ್ತು ಬೀಳಬೇಕಾದೀತು! ಪ್ರವಾಸದ ನೆನಪಿಗೆ ಸ್ಮರಣಿಕೆ ತರಲು ದೊಡ್ಡ ಮಾರ್ಕೆಟ್ ಕೂಡಾ ಇಲ್ಲಿದೆ.

ಔಷಧೀಯ ಸಸ್ಯಗಳ ಆಗರವಾಗಿರುವ ಇಲ್ಲಿ ವಾರ್ಷಿಕ 524 ಸೆಂ.ಮೀ ಮಳೆಯಾಗುತ್ತದೆ. ಹೀಗಾಗಿ ತಂಪಿರುವ ಜಾಗದಲ್ಲಿ ರಕ್ತಹೀರುವ ಜಿಗಣೆಗಳು ಕಾಲೇರಬಹುದು. ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಳ್ಳಿ. ಜೊತೆಗೆ ವಿವಿಧ ಜಾತಿಯ ಕೋತಿಗಳ ಬೃಹತ್ ಸಮೂಹವೇ ಇಲ್ಲಿದೆ. ಕೈಯಲ್ಲಿ ತಿಂಡಿ ಕವರ್ ಹಿಡಿದು ಬರುವ ಪ್ರವಾಸಿಗರನ್ನು ಇವು ಕಾತುರದ ಕಣ್ಣಲ್ಲಿ ನೋಡುತ್ತಿರುತ್ತವೆ. ಅವಕಾಶ ಸಿಕ್ಕಾಗ ದಾಳಿ ಮಾಡುತ್ತವೆ. ಹಾಗಾಗಿ ನಡೆದಾಡುತ್ತಿರುವಾಗ ನಿಮ್ಮ ಹುಷಾರಿಯಲ್ಲಿ ನೀವು ಇರುವುದು ಒಳಿತು.

ನಗರ ಜೀವನದ ಜಂಜಾಟ ಮರೆತು ಕುದುರೆಗಳನ್ನೇರಿ ಅಥವಾ ಚಾರಣ ಮಾಡುತ್ತಾ, ಹಕ್ಕಿಗಳ ಇಂಪಾದ ಧ್ವನಿಯಾಲಿಸುತ್ತಾ ಇಲ್ಲಿನ ಕಾಡು ಸುತ್ತುವುದು ನಿಜಕ್ಕೂ ಚೇತೋಹಾರಿ ಅನುಭವ. ಒಮ್ಮೆ ಇದನ್ನು ಅನುಭವಿಸಿದವರು ವರ್ಷಕ್ಕೊಮ್ಮೆಯಾದರೂ ಇಲ್ಲಿ ಬಂದು ಮೂರು ದಿನ ಉಳಿದುಹೋಗಬೇಕೆಂಬ ವಾಂಛೆ ಹುಟ್ಟುವುದು ಖಂಡಿತ.

**ಹೋಗುವುದು ಹೇಗೆ?:** ಮುಂಬೈನಿಂದ 90 ಕಿ.ಮೀ ಅಥವಾ ಪುಣೆಯಿಂದ 120 ಕಿ.ಮೀ ಪಯಣಿಸಿ ದಸ್ತೂರಿ ಕಾರ್ ಪಾರ್ಕಿಂಗ್ ತಲುಪಬೇಕು. ಅಲ್ಲಿಂದ ಕುದುರೆ, ಕಾಲ್ನಡಿಗೆ ಅಥವಾ ಪುಟಾಣಿ ರೈಲಿನಲ್ಲಿ 4 ಕಿ.ಮೀ ಹೋಗಬೇಕು. ಮಳೆಗಾಲವಿಲ್ಲದಿದ್ದಾಗ ರೈಲನ್ನು ನೆರಲ್‌ನಲ್ಲಿಯೂ ಹತ್ತಬಹುದು.

